**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಪಿ.ಸಿ.ಆರ್.ನಂ. **148/2026**

| | | |
|---|---|---|
| ಸಾಕ್ಷಿದಾರರ ಹೆಸರು | ಮಧುಕೇಶ್ವರ | |
| ತಂದೆಯ ಹೆಸರು | ಗುರುವೇಗೌಡ | ಸಿ.ಡಬ್ಲ್ಯೂ – 1 |
| ವಯಸ್ಸು | 37 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಖಾಸಗಿ ಕೆಲಸ | ದಿನಾಂಕಃ |
| ವಾಸಃ | ಬಿಕೆ ರಸ್ತೆ, ರಾಮನಗರ, ಸಾಗರ | 07.04.2026 |

**ಸಾಕ್ಷಿಯ ಸ್ವಪ್ರಮಾಣಿತ ಹೇಳಿಕೆಃ**

**1.** ಆರೋಪಿತಳು ನನ್ನ ಪತ್ನಿ ದಿನಾಂಕ 15.05.2020 ರಂದು ನನ್ನ ವಿವಾಹ ಆರೋಪಿತಳೊಂದಿಗೆ ಆಗಿದ್ದು, ನಮ್ಮಿಬ್ಬರ ವೈವಾಹಿಕ ಜೀವನದಿಂದ ದಿನಾಂಕ 09.02.2021 ರಂದು ಒಂದು ಗಂಡು ಮಗು ಜನಿಸಿದ್ದು, ದಿನಾಂಕ 03.04.2023 ರಂದು ಆರೋಪಿತಳು ಮಗುವಿನೊಂದಿಗೆ ನನಗೆ ತಿಳಿಸದೆ ತನ್ನ ತವರು ಮನೆಗೆ ಹೋಗಿ ನಂತರ ಅವಳು ವಾಪಸ್ಸು ಬಾರದ ಕಾರಣ ಎಂ.ಸಿ 74/2023 ರಂತೆ ದಾಂಪತ್ಯ ಹಕ್ಕುಗಳ ಸ್ವಾಧೀನಕ್ಕಾಗಿ ಸಾಗರದ ಹಿರಿಯ ವಿಭಾಗದ ನ್ಯಾಯಾಲಯದಲ್ಲಿ ಅರ್ಜಿಯನ್ನು ನಾನು ಸಲ್ಲಿಸಿದ್ದೆ. ಸದರಿ ಅರ್ಜಿಯು ದಿನಾಂಕ 08.03.2025 ರಂದು ಮುಕ್ತಾಯಗೊಂಡಿದ್ದು, ನಂತರ ಆರೋಪಿತಳು ಸೊರಬದ ಪ್ರಧಾನ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸ್ 301/2023 ರಂತೆ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿದ್ದಳು. ನಂತರ ನಾನು ಮತ್ತು ಆರೋಪಿತಳು ಸಾಗರದ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಎಂ.ಸಿ–102/2024 ರಂತೆ ಪರಸ್ಪರ ಸಮ್ಮತಿಯೊಂದಿಗೆ ವಿಚ್ಛೇದನ ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ಅದು ಪುರಸ್ಕರಿಸಲ್ಪಟ್ಟಿದ್ದು, ನಂತರ ಸದರಿ ಆದೇಶದೊಂದಿಗೆ ಅದೇ ನ್ಯಾಯಾಲಯದಲ್ಲಿ ಎಂ.ಸಿ 38/2025 ರಂತೆ ಪ್ರಕರಣದ ದಾಖಲು ಮಾಡಿರುತ್ತೇವೆ. ಅದರಲ್ಲಿ ಉಭಯೇತರರು ಒಪ್ಪಿಕೊಂಡಂತೆ ಸಕಾಲದಲ್ಲಿ ಸಾಕ್ಷಿ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿಕೊಳ್ಳಬೇಕೆಂಬ ನಿಬಂಧನೆಗೆ ಒಳಪಟ್ಟು ನಾನು ಆರೋಪಿತಳು ಮತ್ತು ಮಗುವಿನ ಸಂಪೂರ್ಣ ನಿರ್ವಹಣೆಗೆ 10 ಲಕ್ಷ ರೂ.ಗಳನ್ನು ಡಿಡಿ ನಂಬರ್

836187 ಮತ್ತು 836188 ರಂತೆ ಆರೋಪಿತಳಿಗೆ ನೀಡಿರುತ್ತೇನೆ. ಸದರಿ ಡಿಡಿ ಗಳ ಮೂಲಕ ಆರೋಪಿತಳು ಹಣವನ್ನು ಪಡೆದುಕೊಂಡು ಈವರೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ಪ್ರಮಾಣ ಪತ್ರ ಸಲ್ಲಿಸಿ ಪ್ರಕರಣ ಮುಕ್ತಾಯಗೊಳಿಸದೇ ನನಗೆ ಆರ್ಥಿಕ ಮತ್ತು ಮಾನಸಿಕ ನೋವುಂಟು ಮಾಡಿರುತ್ತಾಳೆ. ಆರೋಪಿತಳ ಕುರಿತು ನಾನು ಪರಿಶೀಲನೆ ಮಾಡಿ ವಿಚಾರಿಸಿದಾಗ ಎಂ.ಸಿ 38/2025 ರ ಪ್ರಕರಣವು ಬಾಕಿ ಇರುವಾಗ ಆರೋಪಿತಳು ವಿನಯ್ ಕುಮಾರ್ ಸಿ ಪಾಟೀಲ್ ಎಂಬ ವ್ಯಕ್ತಿಯೊಂದಿಗೆ ವಿವಾಹವಾಗಿ ಸೊರಬದ ನೊಂದಣಾಧಿಕಾರಿಗಳ ಕಚೇರಿಯಲ್ಲಿ ಸದರಿ ವಿವಾಹವನ್ನು ನೊಂದಣಿ ಮಾಡಿಸಿಕೊಂಡು ಆ ವ್ಯಕ್ತಿಯೊಂದಿಗೆ ದಾಂಪತ್ಯ ಜೀವನ ನಡೆಸುತ್ತಿದ್ದಾಳೆ. ಎಂ.ಸಿ 38/2025 ರಲ್ಲಿ ಆರೋಪಿತಳು ಬಂದು ಸಾಕ್ಷಿಯನ್ನು ನುಡಿಯುತ್ತಾಳೆ ಎಂದು ಭಾವಿಸಿ, ನಾನು ಪ್ರತೀ ಮುದ್ದತ್ತಿಗೆ ಹಾಜರಾಗಿದ್ದರೂ ಸಹ ಆರೋಪಿತಳು ಬಂದಿರುವುದಿಲ್ಲ. ನಂತರದಲ್ಲಿ ಆರೋಪಿತಳು ಗರ್ಭಿಣಿಯಾಗಿದ್ದು, ಸದರಿ ವಿಷಯ ನ್ಯಾಯಾಲಯಕ್ಕೆ ತಿಳಿಯಬಾರದು ಎಂದು ಅವಳು ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ದಿನಾಂಕ 16.12.2025 ರಂದು ಆರೋಪಿತಳಿಗೆ ನಾನು ನಮ್ಮ ವಕೀಲರ ಮೂಲಕ ನೋಟೀಸ್ ಅನ್ನು ನೀಡಿ ನನ್ನಿಂದ ಡಿಡಿ ಮೂಲಕ ಪಡೆದುಕೊಂಡ ಹಣವನ್ನು ವಾಪಸ್ಸು ಕೊಡುವಂತೆ ಅಥವಾ ವಿಚ್ಛೇದನ ಪ್ರಕರಣದಲ್ಲಿ ಬಂದು ಸಾಕ್ಷಿ ನುಡಿಯುವಂತೆ ಕೋರಿದ್ದು, ಸದರಿ ನೋಟೀಸ್ ಗೆ ದಿನಾಂಕ 10.01.2026 ರಂದು ಆರೋಪಿತಳು ಉತ್ತರವನ್ನು ನೀಡಿರುತ್ತಾಳೆ.

**2.** ದಿನಾಂಕ 03.01.2026 ರಂದು ಆರೋಪಿತಳು ಹೆಣ್ಣು ಮಗುವಿಗೆ ಜನ್ಮವನ್ನು ನೀಡಿರುವುದಾಗಿ ನಮಗೆ ತಿಳಿದುಬಂದಿರುತ್ತದೆ. ಆದ್ದರಿಂದ ಆರೋಪಿತಳ ವಿರುದ್ಧ ಭಾ. ನ್ಯಾ. ಸಂ ಕಲಂ 318, 324, 316 ಮತ್ತು 82 ರ ಅಡಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.